ಮಾತನಾಡಿ, ಈ ದಿವಸವೇ ಸಾಧ್ಯವಾದರೆ, ಇಲ್ಲವೇ ನಾಳೆಯಾದರೂ ಕೂಡ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು: ನಾಳೆ ಉಳಿದಿರುವಂಥಾದ್ದಕ್ಕೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶವನ್ನು ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಸಿಎಂಜಿವೈ ಬಗ್ಗೆ ಕೊಟ್ಟಿದ್ದೇವೆ. ಈಗ ಸದನದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಯವರು ಇದ್ದಾರೆ. ಒಂದೇ ಒಂದು ನಿಮಿಷ ಅವಕಾಶವನ್ನು ಕೊಡಿ, ನಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಪತ್ರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ತಾವು ದಯಮಾಡಿ ಒಂದು ನಿಮಿಷ ಕೇಳಿ. ಅನೇಕ ಜನ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಲು ಸೂಚನೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಒಂದೂವರೆ ಗಂಟೆಯಾಗಿದೆ, ಅದಕ್ಕೋಸ್ಕರ ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಾಸಕರ ಗೌರವಾರ್ಥ ಒಂದು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಆದುದರಿಂದ ದಯಮಾಡಿ ಎಲ್ಲರೂ ಭೋಜನಕ್ಕೆ ಬರಬೇಕೆಂದು ಹೇಳುತ್ತೇನೆ. ಈಗ ಸದನವನ್ನು ಮಧ್ಯಾಹ್ನ 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವೂ ಭೋಜನ ವಿರಾಮಕ್ಕೆ ಮಧ್ಯಾಹ್ನ 1 ಗಂಟೆ 33 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸದನವು ಮಧ್ಯಾಹ್ನ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಉ) ವಿಷಯ: ಸದನದಲ್ಲಿ ಸಚಿವರುಗಳ ಗೈರು ಹಾಜರಿ ಬಗ್ಗೆ

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾರಿದ್ದಾರೆಂದು ಇಷ್ಟು ಬೇಗ ಬಂದಿದ್ದೀರಿ? ಪಾಪ, ಮಂತ್ರಿಗಳೆಲ್ಲಾ ಭೋಜನದ ನಂತರ ವಿರಾಮದಲ್ಲಿದ್ದಾರೆ. ಅಧಿಕಾರಿಗಳೂ ಇಲ್ಲ, ಮಂತ್ರಿಗಳೂ ಇಲ್ಲ. ಯಾರಿಗೋಸ್ಕರ ಈಗ ಸದನ ನಡೆಸುವುದು?

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ವಿರೋಧ ಪಕ್ಷದಲ್ಲಿದ್ದಾಗ ನೀವು ಏನು ಮಾಡುತ್ತಿದ್ದಿರಿ? ಮಾನ್ಯ ಹೆಗಡೆಯವರೆ, Regular

ಆಗಿ ಸದನಕ್ಕೆ ಬರತಕ್ಕಂಥ ನೀವು ಮತ್ತು ಜ್ಞಾನೇಂದ್ರರವರು ಮಂತ್ರಿಗಳಾಗಲಿಲ್ಲ. ಮಂತ್ರಿಯಾದವರು ಸದನಕ್ಕೆ ಬರುವುದಿಲ್ಲ. ಹೇಗಿದೆ ನೋಡಿ.

ಅಧ್ಯಕ್ಷರು: ಮಂತ್ರಿಗಳು ಬರುವುದಕ್ಕೆ ಹೇಳಿ ಕಳುಹಿಸಿದ್ದೇನೆ. ಬರುತ್ತಾರೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ: ಕನಿಷ್ಟ note ಮಾಡಿಕೊಳ್ಳುವುದಕ್ಕಾದರೂ ಯಾರೂ ಅಧಿಕಾರಿಗಳು ಇದ್ದರೆ ಸದನ ನಡೆಯಲಿ ಎಂದು ಹೇಳಬಹುದು. ಅವರಿಗೆ ಇನ್ನೂ ಅಸಡ್ಡೆ. ಮಂತ್ರಿಗಳನ್ನಂತೂ ಕೇಳುವ ಹಾಗೇ ಇಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್): ಮಾನ್ಯ ಅಧ್ಯಕ್ಷರೆ, ಸದನ ಮಧ್ಯಾಹ್ನ ಎರಡೂವರೆ ಗಂಟೆಗೆ ಎಂದು ತಾವು ಕರೆದ ಮೇಲೆ, ಆದರೂ ಕೂಡ ಇವತ್ತು ಒಬ್ಬರೂ ಕೂಡ ಮಂತ್ರಿಗಳು ಸದನದಲ್ಲಿ ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳ ಕಡೆಯಿಂದ ಇವತ್ತು ಭೋಜನ ವ್ಯವಸ್ಥೆ ಇದ್ದುದರಿಂದ ಅವರಿಗೆ ಅಲ್ಲಿ ಹೋಗಿದ್ದಾರೆಂದರೆ ಅದರಲ್ಲಿ ತಪ್ಪಿಲ್ಲ. ಏಕೆಂದರೆ ಅವರು Council members, ಬೇರೆಯವರು ಇರುವವರೆಗೆ ಅವರು ಇರಬೇಕು. Chief Minister ಇರಬಹುದು, ಬೇರೆ ಮಂತ್ರಿಗಳು ಇರಬಹುದು, ಇಷ್ಟು ಹೊತ್ತಾದರೂ ಸದನಕ್ಕೆ ಬಾರದೆ ಏನಿದು? ಯಾರಿಗೆ interest ಇದೆಯೋ ಅವರಿಗಾದರೂ ಮಂತ್ರಿ ತಾವು ಮಂತ್ರಿ ಮಾಡಿಸಿ ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಹೇಳುತ್ತಿದ್ದೇನೆ. ಈ ರೀತಿ ಮಂತ್ರಿಗಳಾದವರು ಸದನಕ್ಕೆ ಬರದಿರುವುದು ಒಳ್ಳೆಯದೆಂದು ತಾವು ಭಾವಿಸುವುದಾದರೆ ಸದನ ನಡೆಸಿ. ಯಾರೋ ಒಬ್ಬರು ಇಬ್ಬರು ಇದ್ದಾರೆ, ನಾಲ್ಕು ಜನ absent. ಇದ್ದಾರೆಂದರೆ ಸದನ ನಡೆಸುವುದಕ್ಕೆ ಅಡ್ಡಿ ಇಲ್ಲ. Represent ಮಾಡತಕ್ಕಂಥವರು ಯಾರೂ ಸಹ ಇಲ್ಲ ಎಂದರೆ ಇದು ನಿಜವಾಗಿಯೂ ಅಗೌರವ ತರತಕ್ಕಂಥದ್ದು, ನಿಮಗೂ ಸಹ ಅಗೌರವ ಮತ್ತು ಇಡೀ ಸದನಕ್ಕೆ ಅಗೌರವ ತೋರಿಸಿದಂತಾಗುತ್ತದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಎಲ್ಲಿಯವರೆಗೆ ಮಂತ್ರಿಯಾದವರು ಸದನಕ್ಕೆ ಬರುವುದಿಲ್ಲ, ಅಲ್ಲಿಯವರೆಗೆ ಸದನ ನಡೆಸತಕ್ಕಂಥದ್ದು ಒಳ್ಳೆಯದಲ್ಲ. ನಾವು ಇದನ್ನು protest ಮಾಡಿ walkout ಮಾಡುತ್ತೇವೆ. ಇದು ಚೆನ್ನಾಗಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಈ ಸರ್ಕಾರ ಸತ್ತುಹೋಗಿಬಿಟ್ಟಿದೆ. It is a dead Government. ಒಬ್ಬರ co-ordination ಸಹ ಇಲ್ಲ. ...

(ಅಡಚಣೆ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಕೋರಂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಎಲ್ಲರೂ ಈಗ ಬರುತ್ತಾರೆ.

(ಅಡಚಣೆ)

ಶ್ರೀ ಡಿ.ಕೆ. ಶಿವಕುಮಾರ್: ಮಂತ್ರಿಯಾಗದೆ ಇಷ್ಟು ಅವಮಾನ ವಾಗಿದ್ದರೂ ಮಾತನಾಡುತ್ತಿದ್ದೀರಲ್ಲಾ. ಮಾನ್ಯ ಹೆಗಡೆಗೆ ಮತ್ತು ಆರಗ ಜ್ಞಾನೇಂದ್ರ ರವರಿಗೆ ಆಗಿರುವ ಅವಮಾನ ಪಾಪ, ನೀವಿಬ್ಬರೂ ...

(ಅಡಚಣೆ)

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರು ಸಭಾತ್ಯಾಗ ಮಾಡಿದರು)

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ಸರ್ಕಾರ ಬಂದು ಮೂರು ತಿಂಗಳಾಗಿದೆಯಷ್ಟೆ. ಇನ್ನೂ 9 ತಿಂಗಳು ಅವಕಾಶ ನಮಗೆ ಕೊಡಿ. ಎಲ್ಲಾ ಸರಿಹೋಗುತ್ತದೆ.

(ಅಡಚಣೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಮಂತ್ರಿಗಳು ಬರುತ್ತಾರೆ. ದಯವಿಟ್ಟು ಉಳಿದ ಸದಸ್ಯರಿಗೆ ...

(ಅಡಚಣೆ)

ಶ್ರೀ ಎನ್. ಚಲುವರಾಯಸ್ವಾಮಿ: ಬರುತ್ತಿದ್ದೇವೆ. ಸ್ವಲ್ಪ ಸಮಾಧಾನದಿಂದ ಇರಿ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಸದನ ಸೇರಿದೆ. ಅಧ್ಯಕ್ಷರು ಬಂದು ಕುಳಿತಿದ್ದಾರೆ. ಕನಿಷ್ಟ ಅವರಿಗಾದರೂ ಗೌರವ ಬೇಡವೇ? ಮುಂದುಗಡೆ ಸಾಲಿನಲ್ಲಿ ಕನಿಷ್ಟ ಯಾರಾದರೂ ಒಬ್ಬ ಮಂತ್ರಿಯಾದರೂ ಬೇಡವೇ? ಏನು ನೀವು (ಚೆಲುವರಾಯಸ್ವಾಮಿಯವರನ್ನು ಉದ್ದೇಶಿಸಿ), ಸಮಾಧಾನವಾಗಿರಿ ಎಂದು ಹೇಳಿದರೆ ನಿಮಗೆ ಇಷ್ಟ ಬಂದ ಹಾಗೆ ಸದನ ನಡೆಸುವುದಕ್ಕಾಗುವುದಿಲ್ಲ. ಅಧ್ಯಕ್ಷರು ಬಂದು ಕುಳಿತು ಹತ್ತು ನಿಮಿಷವಾಯಿತು. ಈಗ ತಾವು ಮಾಡುವ ತಪ್ಪಿಗೆ ಎಲ್ಲವನ್ನೂ ಅಧ್ಯಕ್ಷರ ತಲೆ ಮೇಲೆ ಹಾಕಿಕೊಳ್ಳಬೇಕೇ? ಕನಿಷ್ಟ ಒಬ್ಬರಾದರೂ ಮಂತ್ರಿಗಳು ಸದನದಲ್ಲಿ ಇರಬೇಡವೇ? ಮೊದಲ ಸಾಲಿನಲ್ಲಿ ಒಬ್ಬರೂ ಇಲ್ಲ. ಎರಡನೇ ಸಾಲಿನಲ್ಲಿ ಸಹ ಒಬ್ಬರೂ ಇಲ್ಲ.

ಶ್ರೀ ಎಸ್. ರಾಜೇಂದ್ರನ್: ಆ ಮಂತ್ರಿಯೊಬ್ಬರು ಏಕೆ ಮುಂದುಗಡೆ ಬಂದು ಕುಳಿತುಕೊಳ್ಳಬಾರದು? ತಾವು ಮುಂದೆ ಬಂದು ಕುಳಿತುಕೊಳ್ಳಬೇಕು. ನೀವು ಹಿಂದುಗಡೆ ಕುಳಿತಿದ್ದೀರಿ. ಮುಂದಕ್ಕೆ ಬನ್ನಿ. ಆಮೇಲೆ ಹಿಂದಕ್ಕೆ ಹೋಗಬಹುದು. ಬನ್ನಿ. You are a Minister in this Government.

(ಅಡಚಣೆ)

ಅಧ್ಯಕ್ಷರು: ಕೂಡಲೇ ಸದನಕ್ಕೆ ಎಲ್ಲಾ ಮಂತ್ರಿಗಳನ್ನು ಕರೆಸಿ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 2 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಂಡಾಗ ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಈಗ ನಿಯಮ–69ರ ಮೇಲೆ ಚರ್ಚೆ. ಅದಕ್ಕಿಂತ ಮೊದಲು..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಝೀರೋ ಅವರ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ ನೀವು.

ಅಧ್ಯಕ್ಷರು: ನಾಳೆ ಕೊಡುತ್ತೇನೆ. ವಿರೋಧ ಪಕ್ಷದವರು ಹೊರಗಡೆ ಹೋಗಿದ್ದಾರೆ. ಬಿಲ್ ಹಾಕಿಸಿ ನಾವು ಬರುತ್ತೇವೆಂದು ಹೇಳಿರುವುದರಿಂದ ಅವರು ಬರುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು: ಅವರಿಗೆ ಜವಾಬ್ದಾರಿ ಬೇಡವೆ?

ಅಧ್ಯಕ್ಷರು: ಹೌದು ಸ್ವಾಮಿ ಅವರಿಗಿಂತ ನಿಮಗೆ ಹೆಚ್ಚು ಜವಾಬ್ದಾರಿ ಇದೆ. ನಿಮ್ಮ ಆಡಳಿತ ಪಕ್ಷದ ಸದಸ್ಯರು ನಾನು ಬಂದು ಕುಳಿತಾಗ ಎಷ್ಟು ಜನ ಇದ್ದೀರಿ? ಮಂತ್ರಿಗಳು ಎಷ್ಟು ಜನ ಇದ್ದೀರಿ? ಅಧಿಕಾರಿಗಳು ಎಷ್ಟು ಜನ ಇದ್ದರು? ಸರ್ಕಾರ ನಡೆಸುತ್ತಿರುವವರು ನೀವು ಸ್ವಾಮಿ. ನಿಮಗೋಸ್ಕರ ಈ ಸಭೆ, ನೀವು ಕರೆದಿರುವುದು. ಆದ್ದರಿಂದ ಜವಾಬ್ದಾರಿಯಿಲ್ಲದೆ ನಡೆದುಕೊಳ್ಳುತ್ತಿದ್ದೀರಿ. ಒಂದು ಅಥವಾ ಎರಡು ಸಾರಿ, ಆ ರೀತಿ ಮಾಡಿದರೆ ಗೌರವ ತರತಕ್ಕಂಥದ್ದಲ್ಲ. ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿ ಇದು ಮರುಕಳಿಸಬಾರದು. ಅದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಿಯಮ–69ರ ಮೇಲೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡುವುದಕ್ಕಿಂತ ಮೊದಲು ಈಗಾಗಲೇ ಮೂರು ಗಂಟೆಯಾಗಿ ಹೋಗಿದೆ. ದಯಮಾಡಿ ಇವತ್ತು ಎಷ್ಟು ಗಂಟೆಯಾದರೂ ಚರ್ಚೆ ಮುಕ್ತಾಯವಾಗಬೇಕು. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಅಥವಾ ಎರಡು ಗಂಟೆ ಉತ್ತರವನ್ನು ಕೊಡುತ್ತಾರೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ನಾಳೆ ಮಾಡನಾಡುತ್ತೇನೆಂದು ಯಾರೂ ಹೇಳಬಾರದು, ಇವತ್ತು ಚರ್ಚೆ ಮುಕ್ತಾಯವಾಗಬೇಕು.